ಮಾಡುವವರು ಕೇಂದ್ರ ಸರ್ಕಾರದವರು, ರಾಜ್ಯ ಸರ್ಕಾರದವರು ಇದಕ್ಕೆ ಹಣ ಕೊಡುವುದಿಲ್ಲ. ಐ.ಸಿ.ಡಿ.ಎಸ್. ಪ್ರಾಜೆಕ್ಟ್ ಅನ್ನು ಮಂಜೂರು ಮಾಡಬೇಕಾದರೆ ಕೇಂದ್ರ ಸರ್ಕಾರದ ನಾರ್ಮ್ಸ್ ಪ್ರಕಾರ ಶೇಕಡಾ 30 ರಷ್ಟು ಪರಿಶಿಷ್ಟ ಜಾತಿಃ ವರ್ಗಗಳ ಜನಸಂಖ್ಯೆ ಇರಬೇಕು. ನಿಮ್ಮ ತಾಲ್ಲೂಕಿನಲ್ಲಿ ಶೇಕಡಾ 10ರಷ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ಇದ್ದರೂ ಕೂಡ, ನಿಮ್ಮ ತಾಲ್ಲೂಕು ಪಶ್ಚಿಮ ಘಟ್ಟಕ್ಕೆ ಸೇರಿರುವ ಕಾರಣ, ಇಲ್ಲಿಗೆ ಐಸಿಡಿಸ್ ಪ್ರಾಜೆಕ್ಟ್ ಮಂಜೂರು ಮಾಡಬೇಕೆಂದು ನಾವು ಮತ್ತೊಂದು ಪತ್ರ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾದ ಶ್ರೀಮತಿ ಬಸವರಾಜೇಶ್ವರಿಯವರು ಮೊನ್ನೆ ರಾಜ್ಯಕ್ಕೆ ಬೇಟಿಯಿತ್ತಾಗ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು ನಿನ್ನೆ ಅವರನ್ನು ಕಂಡು ಮಾತನಾಡಿದ್ದಾರೆ, ನಾನೂ ಕೂಡ ಮಾತನಾಡಿದ್ದೇನೆ. ಇನ್ನೂ 9ಐಸಿಡಿಎಸ್ ಪ್ರಾಜೆಕ್ಟ್‌ಗಳು ಕೇಂದ್ರ ಸರ್ಕಾರದಿಂದ ಮಂಜೂರಾಗಬೇಕಾಗಿದೆ, ಅವು ಮಂಜೂರು ಆಗುತ್ತದೆ. ತಮ್ಮ ತಾಲ್ಲೂಕು ಪಶ್ಚಿಮಘಟಕ್ಕೆ ಸೇರಿದ್ದು, ಅಲ್ಲಿ ಪರಿಶಿಷ್ಟ ಜಾತಿ ವರ್ಗಗಳ ಜನಸಂಖ್ಯೆ ಶೇಕಡಾ 10 ರಷ್ಟಿದ್ದರೂ ಅಲ್ಲಿಗೆ ಪ್ರಾಜೆಕ್ಟ್ ಅನ್ನು ಮಂಜೂರು ಮಾಡಿಕೊಡಲೇ ಬೇಕೆಂದು ಪ್ರಸ್ತಾವನೆ ಕಳುಹಿಸಿದ್ದೇವೆ. ಇನ್ನು 9 ಸಿಡಿಎಸ್ ಪ್ರಾಜೆಕ್ಟ್‌ಗಳು ಮಂಜೂರಾಗ ಬೇಕಾಗಿರುವುದರಿಂದ, ಅಧ್ಯಕ್ಷರ ಮೂಲಕ ನಾನು ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುತ್ತಿದ್ದೇನೆ, ಸದರಿ ವರ್ಷದಲ್ಲಿಯೇ ಈ ಪ್ರಾಜೆಕ್ಟ್ ಗಳನ್ನು ಮಂಜೂರು ಮಾಡಿಸಿಕೊಡುತ್ತೇನೆ. ಮತ್ತು ಕೇಂದ್ರ ಸರ್ಕಾರದಲ್ಲಿರುವ ಒಪ್ಪಿಗೆ ಕೊಟ್ಟಿದ್ದಾರೆ. ಆದುದರಿಂದ, ಈ ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರುತ್ತೇವೆ.

ಶ್ರೀ ಮನೋಹರ ಐನಾಪುರಃ : ಇನ್ನೂ 9 ಐಸಿಡಿಎಸ್ ಪ್ರಾಜೆಕ್ಟ್‌ಗಳು ಮಂಜೂರಾಗಬೇಕಾಗಿದೆಯೆಂದು ಈಗತಾನೇ ಮಾನ್ಯ ಸಚಿವರು ಹೇಳಿದರು. ಯಾವ್ಯಾವ ತಾಲ್ಲೂಕುಗಳಲ್ಲಿ ಈ 9 ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಲಾಗಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಧರ್ಮಸಿಂಗ್ : 1993-94ನೇ ಸಾಲಿನಲ್ಲಿ 18 ಐಸಿಡಿಎಸ್ ಪ್ರಾಜೆಕ್ಟ್‌ಗಳು ಕ್ಲಿಯರ್ ಆಗಿದ್ದು, ಇನ್ನೂ 9 ಪ್ರಾಜೆಕ್ಟ್‌ಗಳು ಮಂಜೂರಾಗಬೇಕಿರುವುದರಿಂದ ಉತ್ತರ ಕನ್ನಡ ಜಿಲ್ಲೆಯು ಸೇರಿದಂತೆ ಇತರ ಜಿಲ್ಲೆಗಳನ್ನು ಸೇರಿಸಿಕೊಂಡಿದ್ದು, ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿಕೊಟ್ಟಿದ್ದೇವೆ. ಆ ಪ್ರಸ್ತಾವನೆ ಮಂಜೂರಾಗುತ್ತದೆ.

ರಾಜ್ಯದಲ್ಲಿರುವ ಉದ್ಯೋಗವಿನಿಮಯ ಕೇಂದ್ರಗಳ ಸಂಖ್ಯೆ.

205 ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ), ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಸಂಖ್ಯೆ ಎಷ್ಟು ಹಾಗೂ ಅವು ಎಲ್ಲೆಲ್ಲಿ ಇರುತ್ತವೆ (ವಿವರ ನೀಡುವುದು)

ಆ) 1993ನೇ ಮಾರ್ಚ್ ಅಖೈರವರೆಗೆ ದಕ್ಷಿಣ ಕನ್ನಡದ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿರುವ ಅಭ್ಯರ್ಥಿಗಳ ಒಟ್ಟು ಸಂಖ್ಯೆ ಎಷ್ಟು (1988 ರಿಂದ ವರ್ಷವಾರು ವಿವರ ನೀಡುವುದು).

ಇ) ದಕ್ಷಿಣ ಕನ್ನಡದ ಉದ್ಯೋಗ ವಿನಿಮಯ ಕೇಂದ್ರದಿಂದ ಸಂದರ್ಶನಗಳಿಗೆ ಕಳುಹಿಸುವಾಗ ಅನುಸರಿಸುವ ನೀತಿ ನಿಯಮಗಳೇನು

ಈ) ಇಲ್ಲಿ ನಾಲ್ಕೈದು ವರ್ಷಗಳಾದರೂ ನೋಂದಾವಣೆ ಹೊಂದಿದ ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಅವಕಾಶ ಸಿಕ್ಕದಿರಲು ಕಾರಣವೇನು?

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ (ಕಾರ್ಮಿಕ ಸಚಿವರು)

ಅ) ರಾಜ್ಯದಲ್ಲಿ 32 ಉದ್ಯೋಗ ವಿನಿಮಯ ಕೇಂದ್ರಗಳಿವೆ. ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಆ) 1993ನೇ ಮಾರ್ಚ್ ಅಂತ್ಯಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಯಲ್ಲಿ 74,135 ಅಭ್ಯರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಉದ್ಯೋಗಾಕಾಂಕ್ಷಿಗಳಾಗಿದ್ದರು.

1987-88ರಿಂದ 1992-93ರವರೆಗಿನ ವರ್ಷವಾರು ವಿವರ ಈ ರೀತಿಯಿದೆ.

ಕ್ರಮ ಸಂಖ್ಯೆ	ವರ್ಷ	ದಾಖಲೆಯಲ್ಲಿದ್ದ ಅಭ್ಯರ್ಥಿಗಳ ಸಂಖ್ಯೆ
1.	1987-88	47,543
2.	1988-89	53,941
3.	1989-90	64,087
4.	1990-91	71,435
5.	1991-92	74,550
6.	1992-93	74,135

ಇ) ಉದ್ಯೋಗ ವಿನಿಮಯ ಕೇಂದ್ರಗಳಿಗೆ ಸರ್ಕಾರಿ ವಲಯದ ನಿಯೋಜಕರಿಂದ ಅಧಿಸೂಚಿಸಲ್ಪಟ್ಟ ಹುದ್ದೆಗಳಿಗೆ ನಿಗಧಿಗೊಳಿಸಿರುವ ಅರ್ಹತೆಗಳು ಅಂದರೆ ವಿದ್ಯಾರ್ಹತೆ ವಯೋಮಿತಿ ಮೀಸಲಾತಿ ಇತ್ಯಾದಿ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳನ್ನು ನೋಂದಣಿ ಜೇಷ್ಠತೆ ಮೇರೆಗೆ ಪುರಸ್ಕರಿಸಲಾಗುವುದು.

ಈ) ಉದ್ಯೋಗ ವಿನಿಮಯ ಕೇಂದ್ರಗಳಿಗೆ ಹುದ್ದೆಗಳು ಅಧಿಸೂಚನೆಯಾಗುವ ಸಂಖ್ಯೆಯ ಆಧಾರದ ಮೇಲೆ ಸಂದರ್ಶನಗಳ ಲಭ್ಯತೆ ದೊರೆಯುತ್ತದೆ. ಈ ರೀತಿಯ ಅಧಿಸೂಚನೆಗಳು ಕಡಿಮೆಯಾಗಿರುವುದರಿಂದ ಅಭ್ಯರ್ಥಿಗಳು 4-5 ವರ್ಷಗಳು ಕಾಯುವುದು ಸಾಮಾನ್ಯವಾಗಿದೆ.

ಅನುಬಂಧ

ರಾಜ್ಯದಲ್ಲಿರುವ ಉದ್ಯೋಗ ವಿನಿಯಮ ಕೇಂದ್ರಗಳ ಪಟ್ಟಿ

1	ಉಪ ಪ್ರಾದೇಶಿಕ ಉದ್ಯೋಗ ವಿನಿಯಮ ಕಛೇರಿ	ಬೆಂಗಳೂರು.
2	ಜಿಲ್ಲಾ ಉದ್ಯೋಗ ವಿನಿಯಮ ಕಛೇರಿ (ಸಾಮಾನ್ಯ),	ಬೆಂಗಳೂರು
3	” (ತಾಂತ್ರಿಕ)	ಬೆಂಗಳೂರು
4	”	ಬೆಳಗಾಂ
5	”	ಬಳ್ಳಾರಿ
6	”	ಬೀದರ್
7	”	ಬಿಜಾಪುರ
8	”	ಚಿಕ್ಕಮಗಳೂರು
9	”	ಚಿತ್ರದುರ್ಗ
10	”	ಗುಲ್ಬರ್ಗ
11	”	ಹಾಸನ
12	”	ಹುಬ್ಬಳ್ಳಿ

13	”	ಕೋಲಾರ
14	”	ಮಡಿಕೇರಿ
15	”	ಮಂಡ್ಯ
16	”	ಮಂಗಳೂರು
17	”	ಮೈಸೂರು
18	”	ರಾಯಚೂರು
19	”	ಶಿವಮೊಗ್ಗ
20	”	ತುಮಕೂರು
21	ನಗರ ಉದ್ಯೋಗ ವಿನಿಮಯ ಕಛೇರಿ	ಬಾಗಲಕೋಟೆ
22	”	ಭದ್ರಾವತಿ
23	”	ಕುಂದಾಪುರ
24	”	ದಾಂಡೇಲಿ
25	”	ದಾವಣಗೆರೆ
26	”	ಗದಗ್-ಬೆಟಗೇರಿ
27	”	ಹೊಸಪೇಟೆ
28	”	ಕೆ.ಜಿ.ಎಫ್
29	”	ಕಾರವಾರ
30	ಅಂಗವಿಕಲ ವಿಶೇಷ ಉದ್ಯೋಗ ವಿನಿಮಯ ಕೇಂದ್ರ,	ಬೆಂಗಳೂರು
31	ವಿಶಿಷ್ಟವೃತ್ತಿ ಮತ್ತು ಕಾರ್ಯನಿರ್ವಾಹಕ ಉದ್ಯೋಗ ವಿನಿಮಯ ಕೇಂದ್ರ	ಬೆಂಗಳೂರು
32	ರಾಜ್ಯದ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ವಿಶೇಷ ಉದ್ಯೋಗ ವಿನಿಮಯ ಕೇಂದ್ರ	ಬೆಂಗಳೂರು.

ಶ್ರೀ ಬಿ.ಎಂ.ಇದಿನಬ್ಬ : ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ದಕ್ಷಿಣ ಕನ್ನಡದ ಉದ್ಯೋಗ ವಿನಿಮಯ ಕೇಂದ್ರದಿಂದ ಸಂದರ್ಶನಗಳಿಗೆ ಕಳುಹಿಸುವಾಗ ಅನುಸರಿಸುವ ನೀತಿ-ನಿಯಮಗಳೇನು ಎಂಬ ಪ್ರಶ್ನೆಗೆ ಉತ್ತರವಾಗಿ, ಉದ್ಯೋಗ ವಿನಿಮಯ ಕೇಂದ್ರಗಳಿಗೆ ಸರ್ಕಾರಿ ವಲಯದ ನಿಯೋಜಕರಿಂದ ಅಧಿಸೂಚಿಸಲ್ಪಟ್ಟ ಹುದ್ದೆಗಳಿಗೆ ನಿಗದಿಗೊಳಿಸಿರುವ ಅರ್ಹತೆಗಳು ಅಂದರೆ, ವಿದ್ಯಾರ್ಹತೆ, ವಯೋಮಿತಿ,ಮೀಸಲಾತಿ, ಇತ್ಯಾದಿ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳನ್ನು ನೋದಣಿ ಜ್ಯೇಷ್ಠತೆ ಮೇರೆಗೆ ಪುರಸ್ಕರಿಸಲಾಗುವುದೆಂದು ಹೇಳಿದ್ದಾರೆ. ಆದರೆ, ಈ ಅರ್ಹತೆಗಳನ್ನು ಒತ್ತಟ್ಟಿಗಿಟ್ಟು ಅನೇಕ ಬಾರಿ ಅಧಿಕಾರಿಗಳು ಇವರ ಇಚ್ಛೆಯಂತೆ ಸಂದರ್ಶನ ಕರೆಯುತ್ತಾರೆ. ಎಷ್ಟೋ ಕಡೆ ಈ ರೀತಿ ಆಗಿರುವುದರಿಂದ ಇದರ ಬಗ್ಗೆ ತಾವು ಯಾವ ರೀತಿಯ ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಬ್ಲೇಸಿಯಸ್ ಎಂ.ಡಿಸೌಜ್ : ಸನ್ಮಾನ್ಯ ಅಧ್ಯಕ್ಷರೆ, ಯಾವ ನೀತಿ -ನಿಯಮಗಳ ಪ್ರಕಾರ ಸಂದರ್ಶನಕ್ಕೆ ಹೆಸರುಗಳನ್ನು ಕಳುಹಿಸಬೇಕೋ ಅದೇ ನಿಯಮದ ಪ್ರಕಾರ ಕಳುಹಿಸಬೇಕಾಗುತ್ತದೆ. ನೀತಿನಿಯಮಗಳನ್ನು ಅನುಸರಿಸದಿರುವ ಯಾವುದಾದರೊಂದು ನಿರ್ದಿಷ್ಟ ಪ್ರಕರಣವಿದ್ದರೆ, ಸಂಬಂಧಪಟ್ಟ ಅಧಿಕಾರಿ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ, ಕ್ರಮ ಕೈಗೊಳ್ಳುವುದರಲ್ಲಿ ನಾವು ಹಿಂದು-ಮುಂದು ನೋಡುವುದಿಲ್ಲ. ತಾವು ರೀತಿಯ ಒಂದೇ ಒಂದು ಪ್ರಕರಣ ತೋರಿಸಿದರೆ ಸಾಕು, ಅಂತಹ ಅಧಿಕಾರಿ ಮೇಲೆ ಕ್ರಮ ಕೈಗೊಂಡು ಅವರನ್ನು ಅಮಾನತ್ತಿನಲ್ಲಿಡುತ್ತೇವೆ.

ಶ್ರೀ ಬಿ.ಎಂ.ಇದಿನಬ್ಬ : ಸಂದರ್ಶನಕ್ಕಾಗಿ ಅಭ್ಯರ್ಥಿಗಳು 4-5 ವರ್ಷಗಳು ಕಾಯುವುದು ಸಾಮಾನ್ಯವಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಉದ್ಯೋಗ ವಿನಿಮಯ ಕೇಂದ್ರಗಳಿಗೆ ಹುದ್ದೆಗಾಗಿ ಅಭ್ಯರ್ಥಿಗಳು ನೋಂದಾಯಿಸಿದ ಅರ್ಜಿಗಳು ಜಾಸ್ತಿ ಇರುವುದರಿಂದ ಕಾಯಲೇಬೇಕಾಗುತ್ತದೆ. ಆದರೆ, ನೋಂದಾಯಿಸಿದ ಒಂದೆರಡು ವರ್ಷಗಳಲ್ಲಿಯೇ ಕೆಲವು ಅಭ್ಯರ್ಥಿಗಳಿಗೆ ಸಂದರ್ಶನ ಕರೆ ಬರುತ್ತದೆ.ನೋಂದಣಿ ಮಾಡಿ 5-6 ವರ್ಷಗಳಾದರೂ ಇನ್ನು ಕೆಲವರಿಗೆ ಸಂದರ್ಶನ ಕರೆ ಬರುವುದಿಲ್ಲ. ಇನ್ನೊಂದು ವಿಷಯವೇನೆಂದರೆ, ಉದ್ಯೋಗ ವಿನಿಮಯ ಕೇಂದ್ರದಲ್ಲಿ ಭ್ರಷ್ಟಾಚಾರಕ್ಕೆ ಅವಕಾಶವಿದೆಯೆನ್ನುವ ಮಾತು ಸಹ ಕೇಳಿ ಬರುತ್ತಿದೆ. ಇದರಿಂದ ಅನೇಕ ಅರ್ಹ ಅಭ್ಯರ್ಥಿಗಳು ನಿರಾಶರಾಗುತ್ತಾರೆ. ಭ್ರಷ್ಟಾಚರ ತಪ್ಪಿಸುವುದಕ್ಕೆ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾರೆ? ಉದ್ಯೋಗ ವಿನಿಮಯ ಕೇಂದ್ರದಲ್ಲಿ ಭ್ರಷ್ಟಾಚರದ ದೂರುಗಳು ನಮಗೆ ಆಗಾಗ್ಗೆ ಬರುತ್ತವೆ. ಬಹುಶಃ ಇದು ಕಾರ್ಮಿಕ ಮಂತ್ರಿಗಳ ಗಮನಕ್ಕೆ ಸಹ ಬಂದಿರಬಹುದು. ಇದಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಬ್ಲೇಸಿಯಸ್ ಎಂ.ಡಿಸೌಜ : ಮಾನ್ಯ ಅಧ್ಯಕ್ಷರೆ, ಅಭ್ಯರ್ಥಿಗಳು ನೋಂದಣಿ ಮಾಡಿದ 5-6 ವರ್ಷಗಳಲ್ಲಿ, 7-8 ವರ್ಷಗಳವರೆವಿಗೂ ಸಂದರ್ಶನದ ಕರೆಗಾಗಿ ಕಾಯಬೇಕಾಗುತ್ತದೆ ಆದ ಕಾರಣ, ಹುದ್ದೆಗೆ ಸಂದರ್ಶನದ ಕರೆ ಬರುವುದು ಬಹಳಷ್ಟು ವಿಳಂಬವಾಗುತ್ತದೆ.

ಅದೇ ರೀತಿಯಲ್ಲಿ ಯಾರ್ಯಾರು technically qualified ಜನರಿದ್ದಾರೋ ಅವರಿಗೆ 1-2 ವರ್ಷದೊಳಗೆ ಅವಕಾಶ ಬರುತ್ತದೆ. ಇದರಲ್ಲಿ ಯಾವರೀತಿಯಾದ ಭ್ರಷ್ಟಾಚಾರವೂ ಸಹ ಇಲ್ಲ. ಭ್ರಷ್ಟಾಚಾರವನ್ನು ತೆಗೆದುಹಾಕುವುದಕ್ಕಾಗಿ ನಾವು ಈಗ ಎಲ್ಲಾ ಕಡೆ Computerised Employment Exchange ಮಾಡಬೇಕೆಂದು ಉದ್ದೇಶಿಸಿದ್ದೇವೆ. ಈಗಾಗಲೇ 5 ಕಡೆ Computerise ಮಾಡುವುದಕ್ಕೆ ಬಜೆಟ್‌ನಲ್ಲಿ ಹಣವನ್ನು ಒದಗಿಸಿದ್ದೇವೆ.

ಶ್ರೀ ಬಿ.ಎಂ. ಇದಿನಬ್ಬ : ಭ್ರಷ್ಟಾಚಾರದ ಬಗ್ಗೆ ಅನೇಕ ಕಡೆಗಳಿಂದ ದೂರುಗಳು ಏನು ಬಂದಿದೆ, ಅದನ್ನು ವಿಚಾರಣೆ ಮಾಡುತ್ತೀರಾ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಅದನ್ನು ತಾವು ಕಳಿಸಿಕೊಟ್ಟರೆ ವಿಚಾರಣೆ ಮಾಡಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ವೇಳೆಯು ಮುಗಿಯಿತು. ಇನ್ನು ಮುಂದೂಡಲಾದ ಪ್ರಶ್ನೆಗಳು. ದಿನಾಂಕ 27-8-93ರ ಪ್ರಶ್ನೆಗಳ ಪಟ್ಟಿಯಲ್ಲಿನ ಚುಕ್ಕೆ ಗುರುತಿನ ಪ್ರಶ್ನೆಯ ಸಂಖ್ಯೆ : 328 ಗುರುಪಾದಪ್ಪ ನಾಗಮಾರಪಲ್ಲಿ ಯವರು ತಮ್ಮ ಮುಂದೂಡಲಾದ ಪ್ರಶ್ನೆಯನ್ನು ಕೇಳಬಹುದು.

ರಾಜ್ಯದಲ್ಲಿ ಆಶ್ರಯ ಯೋಜನೆ ಕುರಿತು

328 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಆಶ್ರಯ ಯೋಜನೆಯನ್ನು ಎಂದು ಪ್ರಾರಂಭಿಸಲಾಯಿತು

ಆ) ಈ ಯೋಜನೆಗೆ ಇದುವರೆವಿಗೂ ಒದಗಿಸಿರುವ ಹಣದ ಮೊತ್ತವೆಷ್ಟು (ವರ್ಷವಾರು ಒದಗಿಸಿದ ಹಣವನ್ನು ಜಿಲ್ಲಾವಾರು ವಿವರಗಳಲ್ಲಿ ನೀಡುವುದು)

ಇ) ಈ ಯೋಜನೆ ಪ್ರಾರಂಭವಾದಾಗಿನಿಂದ ಪ್ರತಿವರ್ಷ ಎಷ್ಟು ಮನೆಗಳನ್ನು ನಿರ್ಮಿಸುವ ಗುರಿಯನ್ನು ಹಾಕಿಕೊಳ್ಳಲಾಗಿತ್ತು?